ಕವಿ ಕಾವ್ಯ ಪರಂಪರೆ

2

# ಒಂದನೆಯ ನಾಗವರ್ಮ


ಸಂಪಾದಕರು

ವಿ. ಸೀತಾರಾಮಯ್ಯ

ಲೇಖಕರು

ಪ್ರೊ॥ ಎಚ್. ಎಂ. ಶಂಕರನಾರಾಯಣರಾವ್

ಶ್ರೀ ಪಿ. ವಿ. ಜೋಶಿ

ಡಾ॥ ಡಿ. ಎಸ್. ಕರ್ಕಿ

ವಿದ್ವಾನ್ ಎನ್. ರಂಗನಾಥ ಶರ್ಮ

# ಅನುಬಂಧ ೧

## ಜಯಕೀರ್ತಿಯ ಛಂದೋನುಶಾಸನ

### ಸಪ್ತಮೋಧಿಕಾರ

ವಕ್ಷ್ಯೇಽಕ್ಷರತ್ರಿಪದ್ಯೇಲಾಕ್ಷರಿಕಾ ಷಟ್‌ಪದೀಚತುಷ್ಪದಿಕಾಃ
ಛಂದೋಽವತಂಸ ಸಂಜ್ಞಾ ಮದನವತೀ ಗೀತಿಕಾದಿಮಪಿ ಕರ್ಣಾಟೇ – 1

**ಅರ್ಥ :-** ಕನ್ನಡದಲ್ಲಿ ಪ್ರಸಿದ್ಧವಾದ ಅಕ್ಷರ, ತ್ರಿಪದೀ, ಏಲಾ, ಅಕ್ಷರಿಕಾ, ಷಟ್ಪದೀ, ಚತುಷ್ಪದಿಕಾ, ಛಂದೋವತಂಸ, ಮದನವತೀ, ಗೀತಿಕಾ – ಮುಂತಾದ ವೃತ್ತಗಳ ಲಕ್ಷಣಗಳನ್ನು ಹೇಳುವೆನು.

ರಲಧಾ ರತಿಮದನಶರಾ ದ್ವಿತ್ರಿಚತುರ್ಗಾದಯೋಽಬ್ಧಿವಸುನೃಪಸಂಖ್ಯಾಃ
ಪ್ರಸ್ತಾರೇ ಪೂರ್ವಗುರೋರಧೋ ಲಘೂ ದ್ವೌ ಪರಸ್ಯ ಚೈಕೈಕಲಘುಃ – 2

**ಅರ್ಥ :-** ರತಿ, ಮದನ, ಶರ – ಎಂದು ಮೂರು ಗಣಗಳುಂಟು. ಅವುಗಳಿಗೆ ಕ್ರಮವಾಗಿ ರ, ಲ, ಧ – ಎಂದು ಸಂಜ್ಞಾಂತರಗಳಿವೆ. ಪ್ರಸ್ತಾರದ ಆದಿಯಲ್ಲಿ ರತಿಗಣವು ಎರಡು ಗುರು – – ಉಳ್ಳದ್ದು; ಮದನಗಣವು ಮೂರು ಗುರುವುಳ್ಳದ್ದು. ಶರಗಣವು ನಾಲ್ಕು ಗುರು ವುಳ್ಳದ್ದು – – – –. ರತಿಗಣದಲ್ಲಿ ನಾಲ್ಕು ವೃತ್ತ ಗಳೂ, – – – ರ ಮದನಗಣದಲ್ಲಿ ಎಂಟು ವೃತ್ತಗಳೂ, ಶರಗಣದಲ್ಲಿ ಹದಿನಾರು ವೃತ್ತ ಗಳೂ ಸಂಭವಿಸುತ್ತವೆ. ಇವಕ್ಕೆ ಪ್ರಸ್ತಾರವನ್ನು ಹಾಕುವಾಗ ಮೊದಲಿನ ಗುರುವಿನ ಕೆಳಗೆ ಎರಡು ಲಘುಗಳನ್ನಿಡಬೇಕು. ಮುಂದಿನ ಗುರುವಿನ ಕೆಳಗೆ ಮಾತ್ರ ಒಂದೊಂದು ಲಘುವನ್ನು ಇಡಬೇಕು. ಸರ್ವ ಗುರುವಿನಿಂದ ಹಿಡಿದು ಸರ್ವಲಘು ಆಗುವವರೆಗೂ ಪ್ರ ಸ್ತಾ ರ ಯೋ ೯ ಗ. ಸಂಜ್ಞೆ – ಗುರು (ಗ) ಲಘು ⌣ ಲ.

**ಉದಾಹರಣೆ :-**

| | 1. ರತಿ | 2. ಮದನ | 3. ಶರ |
|---|---|---|---|
| 1 | — — | — — — | — — — — |
| 2 | ∪ ∪ — | ∪ ∪ — — | ∪ ∪ — — — |
| 3 | — ∪ | — ∪ — | — ∪ — — |
| 4 | ∪ ∪ ∪ | ∪ ∪ ∪ — | ∪ ∪ ∪ — — |
| 5 | | — — ∪ | — — ∪ — |
| 6 | | ∪ ∪ — ∪ | ∪ ∪ — ∪ — |
| 7 | | — ∪ ∪ | — ∪ ∪ — |
| 8 | | ∪ ∪ ∪ ∪ | ∪ ∪ ∪ ∪ — |
| 9 | | | — — — ∪ |
| 10 | | | ∪ ∪ — — ∪ |
| 11 | | | — ∪ — ∪ |
| 12 | | | ∪ ∪ ∪ — ∪ |
| 13 | | | — — ∪ ∪ |
| 14 | | | ∪ ∪ — ∪ ∪ |
| 15 | | | — ∪ ∪ ∪ |
| 16 | | | ∪ ∪ ∪ ∪ ∪ |

**ಟಿಪ್ಪಣಿ :-** ನಾಗವರ್ಮನು ತನ್ನ ಛಂದೋಂಬುಧಿಯಲ್ಲಿ ಮೇಲ್ಕಂಡ 3 ಗಣಗಳಿಗೆ ಕ್ರಮವಾಗಿ ಬ್ರಹ್ಮಗಣ, ವಿಷ್ಣುಗಣ, ರುದ್ರಗಣ ಎಂದು ಹೆಸರಿಟ್ಟಿದ್ದಾನೆ.*

ದ್ವಿತ್ರಿಚತುರ್ವರ್ಣಾ ಗಾದ್ಯಾಸ್ತ್ರಿಚತುಃಪಂಚವರ್ಣಕಾ ಲಾದಿಗಣಾಃ
ಕ್ರಮಶೋ ರಲಧೇಷು ಭವಂತ್ಯೇಕೈಕಲಘುರ್ನ ವರ್ತತೇತ್ರ ಗಣಾದೌ — 3

**ಅರ್ಥ :-** ರ, ಲ, ಧ ಗಣಗಳಲ್ಲಿ ಮೊದಲನೆಯ ವರ್ಣವು ಗುರುವಾಗಿದ್ದರೆ, ಆಗ ರಗಣದಲ್ಲಿ 2 ಅಕ್ಷರಗಳೂ, ಲಗಣದಲ್ಲಿ 3 ಅಕ್ಷರಗಳೂ, ಧಗಣದಲ್ಲಿ 4 ಅಕ್ಷರಗಳೂ ಇರುತ್ತವೆ. ಅವುಗಳ ಮೊದಲನೆಯ ವರ್ಣವು ಲಘುವಾಗಿದ್ದರೆ ರಗಣದಲ್ಲಿ 3 ಅಕ್ಷರಗಳೂ, ಲಗಣದಲ್ಲಿ 4 ಅಕ್ಷರಗಳೂ, ಧಗಣದಲ್ಲಿ 5 ಅಕ್ಷರಗಳೂ ಇರುತ್ತವೆ. ಮೇಲ್ಕಂಡ ಯಾವಗಣಗಳಲ್ಲಿಯೂ ಆದಿಯಲ್ಲಿ ಕೇವಲ ಒಂದು ಲಘುಬರುವುದಿಲ್ಲ.

**ಉದಾ :-** ಮೇಲ್ಕಂಡ ಪ್ರಸ್ತಾರದಲ್ಲಿ ಒಂದೇ ಲಘು ಆದಿಯಾದ ಯಾವ ಗಣವೂ ಇಲ್ಲ.*

---

* ತೆಲುಗಿನಲ್ಲಿ ಇವಕ್ಕೆ ಸೂರ್ಯ, ಇಂದ್ರ, ಚಂದ್ರ ಎಂಬ ಹೆಸರಿವೆ; ಇಲ್ಲಿನ ಹೆಸರುಗಳು ರತಿ, ಮದನ, ಶರ, - ಸಂ

[*ಆದಿಲಘು ಬಂದರೆ ಒಂದು ಜೊತೆ ∪ ∪ — ಉಳಿದವು ಯಾವುವಾದರೂ ಆಗಬಹುದು. ಇಲ್ಲಿ ಮಾತ್ರಾ ಲೆಕ್ಕವೂ ಸಲ್ಲದು — ಸಂ.]

ಅಂಗಜಗಣಯುಗಾದ್ ಬಾಣಗಣೇ
ಸಂಗತೇ ಪ್ರತಿಪಾದಮಲ್ಪಾಕ್ಷರಮ್
ಶೃಂಗಾರಪಿಂಡಾದಿ ಕಾವ್ಯೇಷು ತತ್
ಸಂಗೀತಂ ಕರ್ಣಾಟಕೇ ಪ್ರಸಿದ್ಧಮ್ – 4

**ಅರ್ಥ :-** ಪ್ರತಿಪಾದದಲ್ಲಿಯೂ 2 ಮದನಗಣಗಳೂ ಮುಂದೆ ಒಂದು ಬಾಣಗಣವೂ ಬಂದರೆ ಅಲ್ಪಾಕ್ಷರ ಎಂಬ ಛಂದಸ್ಸಾಗುತ್ತದೆ. ಇದು ಶೃಂಗಾರ ಪಿಂಡ ಮುಂತಾದ ಕಾವ್ಯಗಳಲ್ಲಿಯೂ ಕರ್ಣಾಟಕ ಸಂಗೀತದಲ್ಲಿಯೂ ಪ್ರಸಿದ್ಧ ವಾಗಿದೆ.

**ಉದಾ :-** ಅಂಗಜ = ಮದನಗಣ
ಗಣಯುಗಾತ್ = — ॥ —
ಬಾಣಗಣೇ = ಶರಗಣ

ಯದಿ ತು ರತಿಗಣಃ ಪಾದಾದೌ ಪಾದಮಧ್ಯೇ
ಮದನಗಣಯುಗಂ ಪಾದಾಂತೇ ಬಾಣಗಣಮ್
ತದಿದಮಂತರಾಕ್ಷರ ಮಕ್ಷರಜ್ಞೈರ್ಗೀತಂ
ವಿದಿತಮಾರ್ಹತೇ ಕರ್ಣಾಟೇಶ್ವರಕಥಾದೌ – 5

**ಅರ್ಥ :–** ಪಾದಾದಿಯಲ್ಲಿ 1 ರತಿಗಣ, ಪಾದಮಧ್ಯದಲ್ಲಿ 2 ಮದನಗಣ, ಪಾದಾಂತದಲ್ಲಿ 1 ಶರಗಣ ಬಂದರೆ ಅಂತರಾಕ್ಷರವೃತ್ತವೆಂದು ಅಕ್ಷರಜ್ಞರು ಹೇಳಿದ್ದಾರೆ. ಜಿನಸಂಬಂಧಿಯಾದ ಕರ್ಣಾಟೇಶ್ವರಕಥಾದಿಗಳಲ್ಲಿ ಇದು ಪ್ರಯುಕ್ತವೆಂದು ಪ್ರಸಿದ್ಧವಾಗಿದೆ.

[**ಉದಾ :–** ಯದಿತು = ರತಿಗಣ ಪಾದಾದೌ = ಮದನಗಣ
ರತಿಗಣ = ಮದನಗಣ ಪಾದಮಧ್ಯೇ = ಶರಗಣ]

**( – ಎಡೆಯಕ್ಕರ)**

ಪ್ರಥಮೋ ರತಿರೇವ ಮನ್ಮಥಃ ಸ್ಯಾದ್ ದ್ವಿತೀಯೋ ತೃತೀಯೋ
ಪೃಥ ಚತುರ್ಥೇ ಬಾಣಗಣಸ್ತು ಪಂಚಮುಸ್ಥಾನ ಏವ
ಗ್ರಥಿತಂ ಲಕ್ಷಣಮಿತಿ ಯಸ್ಯ ತನ್ಮಧ್ಯಮಾಕ್ಷರಾಖ್ಯಂ
ಪ್ರಥಿತಂ ಕರ್ಣಾಟ ಮಾಲತೀಮಾಧವ ಪ್ರಭೃತಿಕಾವ್ಯೇ – 6

**ಅರ್ಥ** :– ಪಾದದ ಮೊದಲನೆಯ ಸ್ಥಾನದಲ್ಲಿ 1 ರತಿಗಣ, ಎರಡು ಮೂರು ನಾಲ್ಕನೆ ಸ್ಥಾನಗಳಲ್ಲಿ ಮದನಗಣ – ಎಂದರೆ 3 ಮದನಗಣ, ಐದನೆ ಸ್ಥಾನದಲ್ಲಿ 1 ಶರಗಣ ಬಂದರೆ 'ಮಧ್ಯಮಾಕ್ಷರ' ಎನಿಸುತ್ತದೆ. ಇದು ಕನ್ನಡ ಮಾಲತೀ ಮಾಧವ ಕಾವ್ಯದಲ್ಲಿ ಪ್ರಸಿದ್ಧವಾಗಿದೆ.

**( – ನಡುವಣಕ್ಕರ)**

ರತಿಪತಿಗಣಯುಗ್ಮಾದ್‌ರತಿತಃ ಸ್ಮರಯುಗ್ಮಂ ರತಿರಪಿ
ಪ್ರತಿಪಾದಂ ವರ್ತತೇ ಯಸ್ಮಿಂಸ್ತತ್ಸಮಾನಾಕ್ಷರಂ ನಾಮ
ಶ್ರುತಿಕಾಂತಮಕ್ಷರದಕ್ಷೈರಾದೃತ **ಮಸಗಾಖ್ಯ**ಕವಿನಾ
ಪ್ರತಿಪಾದಿತಂ ನನು **ಕರ್ಣಾಟ ಕುಮಾರಸಂಭವ** ಕಾವ್ಯೇ – 7

**ಅರ್ಥ** :– ಪ್ರತಿಯೊಂದು ಪಾದದ ಮೊದಲು 2 ಮದನಗಣ, 1 ರತಿಗಣ, 2 ಮದನಗಣ, ಮತ್ತೆ ಕಡೆಯಲ್ಲಿ 1 ರತಿಗಣ – ಹೀಗೆ ಬಂದರೆ 'ಸಮಾನಾಕ್ಷರ' ಎನಿಸುತ್ತದೆ, ಇದು ಕೇಳಲು ಮನೋಹರವಾಗಿರುತ್ತದೆ. ಅಸಗನೆಂಬ ಕವಿ ಕನ್ನಡ ಕುಮಾರಸಂಭವ ಕಾವ್ಯದಲ್ಲಿ ಈ ವೃತ್ತವನ್ನು ಉಪಯೋಗಿಸಿದ್ದಾನೆ.

**( – ದೊರೆಯಕ್ಕರ)**

ಆದೌ ರತಿಗಣೋ ಮಧ್ಯೇಽತ್ರ ಸ್ಮರಗಣಪಂಚಕಮಂತೇ ತು ಬಾಣಗಣಃ
ಪಾದೇಷ್ವಿಹ ರತಿರ್ವಾ ದ್ವಿತೀಯೇ ತುರ್ಯೇಚ ಸ್ಥಾನೇ ತನ್ಮಹಾಕ್ಷರಾಖ್ಯಮ್
ಪಾದಾದಿಪ್ರಭೃತೀತಿ ಕೇವಲಂ ಸ್ಮರಗಣಷಟ್ಕಯುಂ ಬಾಣಾಂತಂ ಕೇಚಿದಾಹುಃ
ಪಾದೇ ಪಾದೇಽತ್ರ ಪ್ರತಿಗಣಮಪಿ ಯತಿರ್ಲಕ್ಷ್ಯತೇ ಸರ್ವೇಷಾಮಕ್ಷರಾಣಾಮ್
– 8

**ಅರ್ಥ** :– ಆದಿಯಲ್ಲಿ 1 ರತಿಗಣ, ಮಧ್ಯದಲ್ಲಿ 5 ಮದನಗಣ, ಕಡೆಯಲ್ಲಿ 1 ಶರಗಣ ಇದ್ದರೆ 'ಮಹಾಕ್ಷರ' ಎನಿಸುತ್ತದೆ. ಪ್ರತಿಪಾದದ ಎರಡು ಮತ್ತು ನಾಲ್ಕನೆಯ ಗಣಗಳು ರತಿಗಣಗಳಾದರೂ ಆಗಬಹುದು. ಕೆಲವರು ಪಾದಾದಿ ಯಿಂದ ಕೇವಲ 6 ಮದನಗಣಗಳೂ ಕಡೆಯಲ್ಲಿ 1 ಶರಗಣವೂ ಇರಬೇಕೆಂದು ಹೇಳುತ್ತಾರೆ. ಆ ಪಕ್ಷದಲ್ಲಿ 6 ಮದನಗಣಗಳಾದಮೇಲೆ ಯತಿ ಇರಬೇಕು. ಈ ವೃತ್ತದಲ್ಲಿ ಪ್ರತಿಪಾದದ ಕಡೆಯಲ್ಲಿಯೂ ಪ್ರತಿಗಣದಲ್ಲಿಯೂ ಯತಿ ಕಂಡು ಬರು ತ್ತದೆ.

**( – ಪಿರಿಯಕ್ಕರ)**

(ನಾಗವರ್ಮನ ಲಕ್ಷಣ ಸ್ವಲ್ಪ ಭಿನ್ನವಾಗಿದೆ.)

ಕರಕರಾಬ್ಧಿತ್ರ್ಯಂಶಚರಣಾ ದಿಗ್ರಸರತಿಃ
ಸ್ಮರಮಯೀ ಲಾದಿಗಿರಿಹರಾಂಶಾ ಚಾಂತ
ವಿರಮಣಾಚ್ಚಿತ್ರಾ ತ್ರಿಪದಿಕಾ — 9

**ಅರ್ಥ** :— 1 ಮತ್ತು 2 ನೆಯ ಪಾದಗಳಲ್ಲಿ ಒಟ್ಟು 4 — 4 ಗಣಗಳಿರಬೇಕು 3 ನೆಯ ಪಾದದಲ್ಲಿ 3 ಗಣಗಳಿರಬೇಕು. ಮೊದಲಿಂದ 6 ಮತ್ತು 10 ನೆ ಗಣಗಳು ರತಿಗಣಗಳಾಗಿರಬೇಕು. ಉಳಿದವೆಲ್ಲ ಮದನಗಣಗಳು. 7 ಮತ್ತು 11 ನೆಯ ಗಣಗಳು ಲಘುವಿಂದ ಆರಬ್ಧವಾಗಿರಬೇಕು. ಪ್ರತಿಪಾದದ ಕಡೆಯಲ್ಲಿ ಯತಿ ಇರಬೇಕು. ಇದು 'ಚಿತ್ರತ್ರಿಪದಿಕಾ'ವೃತ್ತ.

**ಟಿಪ್ಪಣಿ** :— ಕರಕರ (2+2=4), ಅಬ್ಧಿ=4, ದಿಕ್=10, ರಸ=6, ಗಿರಿ=7, ಹರ=11. ಲಾದಿ=ಲಘುವಿಂದ ಆರಬ್ಧವಾದ ಗಣ.

ಸರ್ವಲಕ್ಷಣಮತ್ರ ಪೂರ್ವವದ್ಧರಧಾಮ್ನಿ
ಗುರ್ವಾದಿ ಬಾಣಗಣಭಾಗ್ ವಿಚಿತ್ರಾ ಸ್ಯಾತ್
ಪೂರ್ವಂ ಕರ್ಣಾಟಚ್ಛಂದೋಮತೇ — 10

**ಅರ್ಥ** :— ಚಿತ್ರತ್ರಿಪದಿಕೆಯಂತೆಯೇ ನಿಯಮಗಳು. 11 ನೆಯ ಗಣ ಮಾತ್ರ ಗುರ್ವಾದಿಯಾಗಿದ್ದು ಪದ್ಯದ ಕಡೆಯಲ್ಲಿ ಶರಗಣವಿದ್ದರೆ 'ವಿಚಿತ್ರತ್ರಿಪದಿಕಾ' ಎನಿಸಿಕೊಳ್ಳುತ್ತದೆ. (ಹರಧಾಮ=ಹನ್ನೊಂದನೆಯ ಸ್ಥಾನ)

ಮಾತ್ರಾಭಿರ್ದ್ವಾಷಷ್ಟ್ಯಾ ಚಿತ್ರಾ ಸ್ಯಾದಿತ್ಯೇವಂ
ಮಾತ್ರಾ ವರ್ಧಂತೇ ಕ್ವಚಿದಸ್ಯಾ ನ್ಯೂನಾಸ್ತಾಃ
ಸೂತ್ರಂ ಪೂರ್ವೋಕ್ತಂ ಕಿಮಮೂಭಿಃ — 11

**ಅರ್ಥ** :— ತ್ರಿಪದಿಕೆಯಲ್ಲಿ ಒಟ್ಟು 62 ಮಾತ್ರೆಗಳೆಂದು ಕೆಲವರು ಹೇಳುತ್ತಾರೆ. ಆದರೆ ಕೆಲವೆಡೆ ಹೆಚ್ಚಾಗಿಯೂ ಕಡಮೆಯಾಗಿಯೂ ಕಂಡುಬರುತ್ತವೆ. ಲಕ್ಷಣವನ್ನು ಹಿಂದೆ ಹೇಳಿದ್ದಾಗಿದೆ. ಈ ಮಾತ್ರೆಗಳನ್ನು ಕಟ್ಟಿಕೊಂಡು ಏನಾಗಬೇಕು ?

ಋತುಹತಗಿರಿಪರಿಮಿತಲಘು ರಿಯಮಥ
ಯತಿಯುತಿರಖಿಲಗುರುರಿಹ ನ ಭವತಿ
ಯತಿಪತಿಗದಿತಮತ ಇತಿ — 12

**ಅರ್ಥ :–** 'ಯತಿಪತಿ'ಗಳ ಮತದಂತೆ ಸರ್ವಲಘುವಾದ ತ್ರಿಪದಿಕೆಯುಂಟು. ಇದರಲ್ಲಿ ಗುರು ಇರುವುದಿಲ್ಲ. ಒಟ್ಟು 42 ಲಘುಗಳಿರುತ್ತವೆ. ಪಾದಾಂತ್ಯದಲ್ಲಿ ಯತಿ ಇರುತ್ತದೆ.

**ಟಿಪ್ಪಣಿ :–** ಋತುಹತಗಿರಿ ($6 \times 7 = 42$).

ಸರ್ವಲಘುರ್ನ ಚೇತ್ ಸರ್ವಥಾ ತ್ರಿಪದಿಕಾ
ಸರ್ವಗುರುಸ್ತು ನ ಭವೇತ್ ಗಿರೀಶಯೋ
ಗುರ್ವಾದಿ ಲಗಣ ಪ್ರತಿಷೇಧಾತ್ – 13

**ಅರ್ಥ :–** ಸರ್ವಲಘುವಾದ ತ್ರಿಪದಿಕಾ ಇಲ್ಲವೇ ಇಲ್ಲ ಎಂದು ಹೇಳುವುದಾದರೆ (ಏಕೆಂದರೆ, ಪಾದಾಂತ್ಯದಲ್ಲಿರುವ ಲಘುವನ್ನು ಎಳೆದು ಹೇಳಬೇಕಾದ್ದರಿಂದ ಅದು ಗುರುವಾಗುತ್ತದೆ) ಸರ್ವಗುರುವಾದ ತ್ರಿಪದಿಕೆಯೂ ಸಂಭವಿಸುವುದಿಲ್ಲವೆಂದೇ ಹೇಳಬೇಕು. ಏಕೆಂದರೆ, 7 ಮತ್ತು 11 ನೆಯಗಣಗಳು ತ್ರಿಪದಿಕೆಯಲ್ಲಿ ಗುರ್ವಾದಿಯಾಗುವುದಿಲ್ಲವೆಂದು ಹೇಳಿದ್ದೇವೆ.

**ಟಿಪ್ಪಣಿ :–** 9 ನೆಯ ಸೂತ್ರದಲ್ಲಿ 7 ಮತ್ತು 11 ನೆಯಗಣಗಳು ಲಘ್ವಾದಿಯಾಗಬೇಕೆಂದು ತಿಳಿಸಿದೆ. ಲಘು ಅಲ್ಲಿ ಬರುವುದರಿಂದ ಸರ್ವಗುರುವಾದ ತ್ರಿಪದಿಕೆ ಸಾಧ್ಯವಿಲ್ಲ. ಲಗಣ=ಮದನಗಣ. ರಲಧಾ ರತಿಮದನಶರಾಃ

ತ್ರಿಪದೀತೃತೀಯಾಂಹ್ರಾ-
ವಪಮುಂಚತ್ಯೇಲೇತಿ
ಸುಪಠಿತಾಗೇಯವಿದಜನ್ಯೈಃ – 14

**ಟಿಪ್ಪಣಿ :–** 'ತೃತೀಯಾಂಹ್ರಾ' ಎಂಬುದು ಯಾವ ಅರ್ಥವನ್ನೂ ಕೊಡುವುದಿಲ್ಲ. 'ತೃತೀಯಾಂಘ್ರಾವಪಮುಂಚತಿ' ಎಂದು ಪಾಠವಿರಬೇಕೆಂದು ತೋರುತ್ತದೆ. ತೃತೀಯಾಂಘ್ರಾ=3 ನೆಯ ಪಾದವು, ಅಪಮುಂಚತಿ=ಅವಮುಕ್ತವಾಗಿದ್ದರೆ, ಎಂದರೆ ಮೂರನೆಯ ಪಾದವಿಲ್ಲದಿದ್ದರೆ – ಎಂದರೆ, ತ್ರಿಪದಿಯ 3 ನೆ ಪಾದದ ಲಕ್ಷಣವಿಲ್ಲದೆ ಇದ್ದರೆ ಆಗ ಹಿಂದೆ ಹೇಳಿದ ತ್ರಿಪದಿಯೇ 'ಏಲಾ' ಎನಿಸಿಕೊಳ್ಳುತ್ತದೆ. ತ್ರಿಪದಿಯ 1 - 2 ನೆ ಪಾದಗಳಲ್ಲಿ $4+4=8$ ಗಣಗಳಿರುತ್ತವೆ. ಈ ಎಂಟು ಗಣಗಳನ್ನೇ ಮೂರು ಸಾಲಾಗಿ ವಿಂಗಡಿಸಿಕೊಂಡರೆ ಏಲಾವೃತ್ತವಾಗುತ್ತದೆ ಎಂದು ತಾತ್ಪರ್ಯ. ಆದರೆ ಉದಾಹರಣೆಯಲ್ಲಿ 7 ಗಣಗಳು ಮಾತ್ರ ಕಂಡುಬರುತ್ತವೆ. 'ದ್ವಿತೀಯಾಂಘ್ರಾವಪಮುಂಚತಿ' ಎಂಬ ಪಾಠವನ್ನೊಪ್ಪಿಕೊಂಡರೆ ಲಕ್ಷಣ ಸರಿಹೋಗುತ್ತದೆ.

ನಾಗವರ್ಮನ ಛಂದೋಂಬುಧಿಯಲ್ಲಿ ಏಳೆಯ ಲಕ್ಷಣ ಹೀಗಿದೆ :

ಭುಜ*ಪಕ್ಷ ಪುರಗಣ
ವ್ರಜದೊಳಾರರೊಳಕ್ಕು
ಮಜಗಣೇಳೆಗಿಭಗತೀ ॥

**ಅರ್ಥ :-** ಭುಜ=2, ಪಕ್ಷ=2, ಪುರ=3 ಹೀಗೆ ಒಟ್ಟು ಏಳೆಯಲ್ಲಿ 7 ಗಣಗಳಿರುತ್ತವೆ. ಆರನೆಯಗಣ ಬ್ರಹ್ಮಗಣವಾಗಬೇಕು.

ಆದ್ದರಿಂದ 'ತೃತೀಯಾಂಘ್ರಾವಪಮುಂಚತಿ' ಎಂಬ ಪಾಠವೂ ಸರಿಹೊಂದುತ್ತದೆ. ಇದರಲ್ಲಿ ಉಳಿದುದೆಲ್ಲ ತ್ರಿಪದಿಯ ಲಕ್ಷಣವೇ.

**ಉದಾ :-**

1 ತ್ರಿಪದೀದ್ವಿ = ಮದನಗಣ
2 ತೀಯಾಂಘ್ರಾ = ”
3 ವಪಮುಂಚ = ”
4 ತ್ಯೇಲೇತಿ = ”
5 ಸುಪಠಿತಾ = ”
6 ಗೇಯು = ರತಿಗಣ (ನಾಗವರ್ಮನ ಮತದಂತೆ ಇದು ಬ್ರಹ್ಮಗಣ)
7 ವಿದಜನ್ಯೈಃ = ಮದನಗಣ.

ಶಾರ್ಙ್ಗಧರನ ಸಂಗೀತರತ್ನಾಕರದಲ್ಲಿ ಏಳೆಯ ಲಕ್ಷಣ ಹೀಗಿದೆ :

ಪಂಚ ಕಾಮಾರತಿಶ್ಚೈಕಾ ಕಾಮೋಽಂತೇ ಚರಣತ್ರಯೇ
ಪ್ರತ್ಯೇಕಂ ತಾಸು ಚೇದೇತಾ ಶ್ಛಂದಸ್ವತ್ಯೋಽಖಿಲಾ ಮತಾಃ
ಗಣಾದೇರ್ನ್ಯೂನತಾಧಿಕ್ಯಾದೇಲಾ ಭಾಸಾ ಇಮಾ ಮತಾಃ 4 - 125

**ಅರ್ಥ :-** ಒಟ್ಟು ಮೂರುಪಾದಗಳಲ್ಲಿ ಮೊದಲು 5 ಮದನಗಣಗಳೂ 1 ರತಿಗಣವೂ ಕಡೆಯಲ್ಲಿ 1 ಮದನಗಣವೂ ಬಂದರೆ ಏಲಾವೃತ್ತವಾಗುತ್ತದೆ. ಈ ಲಕ್ಷಣದಲ್ಲಿ ಯಾವುದೊಂದು ಗಣದಲ್ಲಿ ಅಥವಾ ಪಾದದಲ್ಲಿ ಕೊಂಚ ನ್ಯೂನತೆ ಅಥವಾ ಆಧಿಕ್ಯವಿದ್ದರೂ ಈ ಛಂದಸ್ಸುಗಳು ಏಳೆಯ ಗುಂಪಿನಲ್ಲಿ ಸೇರುತ್ತವೆ.

---

*ನನ್ನ ಬಳಿಯಿರುವ 'ಛಂದೋಂಬುಧಿ' ಪುಸ್ತಕದಲ್ಲಿ ಏಳೆಯ ಲಕ್ಷಣವನ್ನು ಬರೆಯುವಾಗ - 'ಭುಜಗ ಪಕ್ಷಪುರಗಣ' ಎಂದು ಮುದ್ರಿತವಾಗಿದೆ 'ಗ' ಕಾರ ತಪ್ಪು. 'ಭುಜಪಕ್ಷಪುರಗಣ' ಎಂದಿರಬೇಕು.

ಈ ಪಕ್ಷದಲ್ಲಿ ಜಯಕೀರ್ತಿ, ನಾಗವರ್ಮ ಮತ್ತು ಶಾರ್ಙ್ಗಧರ - ಈ ಮೂವರ ಅಭಿಪ್ರಾಯವೂ ಒಂದೇ ಆಗಿ ಕಂಡು ಬರುತ್ತದೆ.

ಮದನಾದ್ಯಾಃ ಶರಗಣಾಂತಾಃ
ಯದಿ ಚರಣಾಶ್ವತ್ವಾರಃ
ಗದಿತಾಶ್ಚೇಚ್ಚತುಷ್ಪದಿಕಾ
ವಿದಿತಾಸೌ **ಚೂಡಾಮಣೌ** – 15

**ಅರ್ಥ :–** ಒಂದೊಂದು ಪಾದದಲ್ಲಿ ಮದನ, ರತಿ, ಶರಗಣಗಳಲ್ಲಿ ಯಾವುದಾದರೂ 3 ಗಣಗಳಿರಬೇಕು. 4 ಪಾದಗಳಿರಬೇಕು. ಇದು ಚತುಷ್ಪದಿಕಾವೃತ್ತ, ಚೂಡಾಮಣಿ ಗ್ರಂಥದಲ್ಲಿ ಪ್ರಸಿದ್ಧವಾಗಿದೆ.

ಕಂದರ್ಪಗಣತೋ ರತಿಗಣಚತುಷ್ಕಂ ಚೇತ್
ಛಂದಸಿ ಜಯಕೀರ್ತೇರಾದಿವರಾಹಾಖ್ಯಾ
ಛಂದೋವತಂಸ ನಾಮೇತಿ ಚತುಷ್ಪದಿಕಾ
ಸಂದೃಷ್ಟಾಸೌ **ಕುಮಾರಸಂಭವಾದೌ** – 16

**ಅರ್ಥ :-** ಒಂದೊಂದು ಪಾದದಲ್ಲಿ 1 ಮದನಗಣ, 4 ರತಿಗಣಗಳಿದ್ದರೆ ಜಯಕೀರ್ತಿಯ ಮತದಂತೆ ಆದಿವರಾಹವೆಂಬ ವೃತ್ತವಾಗುತ್ತದೆ. ನಾಲ್ಕುಪಾದಗಳುಳ್ಳ ಈ ವೃತ್ತವು ಶ್ರೇಷ್ಠವೆನಿಸಿದೆ. ಕುಮಾರಸಂಭವಾದಿ ಕಾವ್ಯಗಳಲ್ಲಿ ಇದು ಕಂಡುಬರುತ್ತದೆ.

**ಉದಾ :** ಕಂದರ್ಪ = ಮದನಗಣ
ಗಣತೋ = ರತಿಗಣ
ರತಿಗ = "
ಣಚತು = "
ಷ್ಕಂಚೇತ್ = "

**ಟಿಪ್ಪಣಿ :-** ಈ ಶ್ಲೋಕದಲ್ಲಿ ಆದಿವರಾಹವೃತ್ತಕ್ಕೆ ಛಂದೋವತಂಸ ಎಂಬ ಹೆಸರಿದೆ ಎಂದೂ ಅರ್ಥಮಾಡಲು ಸಾಧ್ಯ. ನಾಗವರ್ಮನು ಛಂದೋವತಂಸವೆಂದೇ ಹೆಸರಿಟ್ಟಿದ್ದಾನೆ. ಅವನ ಲಕ್ಷಣಪದ್ಯ ಹೀಗಿದೆ :

ಮಂದರಧರಗಣಮೆಸೆದಿರೆ ಮೊದಲೊಳೆ
ಬಂದಿರೆ ಮುಂದೆ ನಾಲ್ಕೆಡೆ ಬಿಸರುಹಜನ್ಮಂ
ಸಂದುದು ಲಕ್ಷಣಮವನಿಯೊಳೀ ತೆಱದಿಂ
ಛಂದೋವತಂಸಕ್ಕೆಸೆದುದು ಗಜಗಮನೇ

ಛಂದೋಂಬುಧಿ 5 – 15

1 ವಿಷ್ಣುಗಣ, 4 ಬ್ರಹ್ಮಗಣಗಳು ಬರಬೇಕೆಂಬುದಾಗಿ ಇದರ ಲಕ್ಷಣ ಸ್ಪಷ್ಟವಾಗಿದೆ.

| | | | | | |
|---|---|---|---|---|---|
| **ಉದಾ :–** ಮಂದರ | = | ವಿಷ್ಣುಗಣ | ಬಂದಿರೆ | = | ವಿಷ್ಣುಗಣ |
| ಧರಗ | = | ಬ್ರಹ್ಮಗಣ | ಮುಂದೆ | = | ಬ್ರಹ್ಮಗಣ |
| ಣಮೆಸೆ | = | ” | (ನಾಲ್ಕಡೆ) | = | ” |
| ದಿರೆವೊ | = | ” | ಬಿಸರುಹ | = | ” |
| ದಲೊಳೆ | = | ” | ಜನ್ಮಂ | = | ” |

ಡಾ॥ ಶಿ. ಚೆ. ನಂದೀಮಠ ಅವರು ಕನ್ನಡ ಕುವಲಯಾನಂದದ 176 ನೆಯ ಪುಟದಲ್ಲಿ “ನಾಗವರ್ಮನು ‘ಇದು ನಾಲ್ಕು ಚರಣಗಳ ಪದ್ಯ. ಪ್ರತಿಚರಣದಲ್ಲಿ ನಾಲ್ಕುಗಣಗಳು; ಅವುಗಳಲ್ಲಿ ಮೊದಲನೆ ಮೂರು ವಿಷ್ಣುಗಣ. ಕೊನೆಯದು ‘ಬ್ರಹ್ಮಗಣ’ವೆಂದು ಹೇಳುವನು” ಎಂದು ಬರೆದಿದ್ದಾರೆ. ಅಲ್ಲದೆ “ಇವನು (ಜಯಕೀರ್ತಿ) ಹೇಳುವ ಲಕ್ಷಣಕ್ಕೂ ನಾಗವರ್ಮನು ಹೇಳುವ ಲಕ್ಷಣಕ್ಕೂ ವ್ಯತ್ಯಾಸವಿದೆ; ನಾಗವರ್ಮನ ಲಕ್ಷಣವನ್ನು ಜಯಕೀರ್ತಿ ಸರಿಯಾಗಿ ತಿಳಿದುಕೊಂಡಿಲ್ಲವೆಂದು ಡಾ॥ ಕರ್ಕಿಯವರ ಮತ” ಎಂದು ತಿಳಿಸಿದ್ದಾರೆ. ನಾಗವರ್ಮನು ಹೇಳಿದ ಛಂದೋವತಂಸದ ಲಕ್ಷಣಕ್ಕೆ ಅವರು ಹೇಳುವ ಅರ್ಥ ಹೇಗೆ ಬರುತ್ತದೆಯೆಂಬುದೂ ಅದರಂತೆ ಲಕ್ಷಣಸಮನ್ವಯ ಹೇಗೆಂಬುದೂ ನಾಗವರ್ಮನ ಲಕ್ಷಣಕ್ಕೂ ಜಯಕೀರ್ತಿಯ ಲಕ್ಷಣಕ್ಕೂ ವಿರೋಧವೇನೆಂಬುದೂ ಚಿಂತನೀಯ.

ಸ್ಮರಗಣಃ ಪರಿತೋಽತ್ರ ಶರಗಣಃ ಪುರಷಷ್ಠ
ಚರಣಾಂತಯೋಸ್ತದಂತೇ ವಿರಾಮಃ
ಕರಕರಪುರಗಣಾಃ ದ್ವಿರಿಹತ್ಯಾಶ್ಚರಣಾಶ್ಚೇತ್
ಸ್ಫುರತಿ ಷಟ್‌ಚರಣವತ್ ಷಟ್ಪದಿಕಾ – 17

**ಅರ್ಥ :–** ಕರಕರ ಪುರಗಣಾಃ = ಕ್ರಮವಾಗಿ 3 ಪಾದಗಳಲ್ಲಿ 2, 2, 3 – ಗಣಗಳಿರಬೇಕು. ಎಂದರೆ 1, 2 ನೆಯಪಾದಗಳಲ್ಲಿ 2 ಗಣಗಳೂ 3 ನೆಯ ಪಾದದಲ್ಲಿ 3 ಗಣಗಳೂ ಇರಬೇಕು. ಈ 3 ಪಾದಗಳೂ ಆವೃತ್ತವಾಗಬೇಕು. ಆಗ ಷಟ್ಪದಿಕಾವೃತ್ತವಾಗುತ್ತದೆ. ಇದರಲ್ಲಿ 2, 6 ನೆಯ ಪಾದಗಳ ಕಡೆಯ ಗಣ ಶರಗಣವಾಗಿರುತ್ತದೆ. ಉಳಿದವೆಲ್ಲವೂ – ಎಂದರೆ ಪ್ರ ತಿ ಚ ರ ಣ ದ ಮೊದಲನೆಯ 2 ಗಣಗಳು – ಮದನಗಣಗಳು.

ಉದಾ :– ಸ್ಮರಗಣಃ = ಮದನಗಣ ಯೋಸ್ತದಂ = ಮದನಗಣ
ಪರಿತೋತ್ರ = " ತೇವಿರಾಮಃ = ಶರಗಣ
ಶರಗಣಃ = "
ಪುರಪಷ್ಠ = "
ಚರಣಾಂತ = "

ಸಂಗೀತರತ್ನಾಕರದಲ್ಲಿ ಷಟ್ಪದಿಯ ಲಕ್ಷಣವನ್ನು ಹೀಗೆ ಹೇಳಿದೆ :

ಷಷ್ಠಸ್ತೃತೀಯಸ್ತ್ರಿಗಣಃ ಪೃಥಗ್‌ದ್ವಿದ್ವಿಗಣಾಃ ಪರೇ
ಚತ್ವಾರಶ್ಚರಣಾ ಬಾಣಪ್ರಾಂತೌ ಷಷ್ಠತೃತೀಯಕೌ
ಶೇಷಾಸ್ತು ಮಾನ್ಮಥಗಣಾ ಯಸ್ಯಾಂ ಸಾ ಷಟ್ಪದೀ ಮತಾ
ಕರ್ಣಾಟಭಾಷಾಯಾ ತಾಲವರ್ಜಿತಾ ನಾದಮುಕ್ತಿಕಾ

ಅರ್ಥ :– 6 ಮತ್ತು 3 ನೆಯ ಪಾದಗಳಲ್ಲಿ 3 ಗಣಗಳಿರಬೇಕು, ಉಳಿದ 4 ಪಾದಗಳಲ್ಲಿಯೂ ಎರಡೆರಡು ಗಣಗಳಿರಬೇಕು. 6 ಮತ್ತು 3 ನೆಯ ಪಾದಗಳ ಕೊನೆಯಲ್ಲಿ ಶರಗಣಗಳಿರಬೇಕು. ಉಳಿದವೆಲ್ಲ ಮದನಗಣಗಳು, ಇವು ಇರತಕ್ಕ ವೃತ್ತಕ್ಕೆ ಷಟ್ಪದಿಯೆಂದು ಹೆಸರು. ಇದು ಕನ್ನಡದಲ್ಲಿ ಪ್ರಯುಕ್ತವಾಗುತ್ತದೆ. ಈ ವೃತ್ತದಲ್ಲಿ ತಾಳನಾದಗಳಿಲ್ಲ.

ಜಯಕೀರ್ತಿ ಮತ್ತು ಶಾರ್ಙ್ಗಧರನ ಲಕ್ಷಣಗಳು ಸಮಾನವಾಗಿವೆ. ತಾಳನಾದಗಳಿಲ್ಲ ಎಂದು ಶಾರ್ಙ್ಗಧರನು ಹೇಳಿರುವುದೊಂದು ವಿಶೇಷ.*

ಸ್ಮರರತಿಪೂರ್ವಂ ಸ್ಮರರತಿಮಧ್ಯಂ ಸ್ಮರಯುಗಗುರು ನಿಧನಂ
ಚರಣಚತುಷ್ಕಂ ಸ್ಥಿರತರಚತುರುತ್ತಿರಶತಮಾತ್ರಮಿದಮ್
ಕರಿವಸುಮಾತ್ರಾವಿರಮಣಯುಕ್‌ಚೇತ್ ಸ್ಫುರತಿ ತದಾಕ್ಷರಿಕಾ
ಗುರುಪರಜಗಣೇತರಗತಿಮಾತ್ರಾಧರಗಣಭಾಗಥವಾ – 18

ಅರ್ಥ :– ಒಂದೊಂದು ಪಾದದಲ್ಲಿ ಮದನ, ರತಿ, ಮದನ, ರತಿ, ಮದನ, ಮದನ – ಹೀಗೆ ಗಣಗಳಿದ್ದು ಕಡೆಯಲ್ಲಿ ಒಂದು ಗುರು ಇರಬೇಕು. ಒಟ್ಟು

* 3, 6 ಸಾಲಿನ ಕಡೆಯ ಗುರುವನ್ನು ಆಯಾಷಟ್ಪದಿಯ ಗಣಗುಣಕ್ಕೆ ತಕ್ಕಂತೆ ತಾಳ ಪ್ರಮಾಣವುಳ್ಳದಾಗಿ ಅಳೆಯಬೇಕು ಎಂಬುದು ಸಂಗೀತಕ್ಕೂ ತಾಳ ವಿವಕ್ಷೆಗೂ ಸಂಬಂಧಿಸಿದ ಸಂಗತಿಯೇ ಹೊರತು ಛಂದೋನಿಯತಿಗೆ ಸಂಬಂಧಿಸಿದ್ದಲ್ಲ - ಎಂಬುದು ಇಲ್ಲಿ ಸ್ಪಷ್ಟಪಡುತ್ತದೆ ಛಂದೋಲಯ ಬೇರೆ; ತಾಳ ಲಯ ಬೇರೆ. ಸಾಹಿತಿಗಳೂ ಸಂಗೀತಗಾರರೂ ಲಯ ಎಂಬ ಮಾತನ್ನೇ ಬಳಸುತ್ತಾರಾಗಿ ಈ ಸಂದಿಗ್ಧಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. — ಸಂ.

ನಾಲ್ಕು ಪಾದಗಳು. ಈ ವೃತ್ತದಲ್ಲಿ ಒಟ್ಟು 104 ಮಾತ್ರೆಗಳಿರುತ್ತವೆ (ಒಂದು ಪಾದಕ್ಕೆ 26 ಮಾತ್ರೆಗಳು) 8 – 8 ಮಾತ್ರೆಗಳಿಗೆ ಒಂದು ಯತಿ. ಇದು ಅಕ್ಷರಿಕಾ ವೃತ್ತ. ಅಥವಾ ಇದರ ಲಕ್ಷಣವನ್ನು ಹೀಗೆ ಹೇಳಬಹುದು : ಇದಕ್ಕೆ ನಾಲ್ಕು ಪಾದಗಳು. ಒಟ್ಟು 104 ಮಾತ್ರೆಗಳು. ಎಲ್ಲಿಯೂ ಮಗಣವೂ ಜಗಣವೂ ( – – – : ⏑ – ⏑ ) ಬರಬಾರದು. ಇತರ ಮಾತ್ರಾಗಣಗಳು ಕ್ರಮವಾಗಿ ಬರಬಹುದು.

ಪ್ರಥಮಕ ಇಹ ಗುರುಪರಕೃತಿಪರಿಮಿತಲಭೃದಿತರೇ
ಪೃಥ ಪಾದಾರತಿಗಣಪರಗತಿಮದನಗಣಾಃ ಸ್ಯುಃ
ಗ್ರಥಿತಪದಾವಲಯಸ್ತ್ಯೈಶ್ಚೇದಿತಿ ಮದನವತೀ
ಪ್ರಥಿತಯತಿಃ ಪ್ರತಿಚರಣಂ ದ್ವಾವಿಂಶತಿಮಾತ್ರಾ – 19

**ಅರ್ಥ** :– ಪ್ರಥಮ ಪಾದದಲ್ಲಿ 20 ಲಘುಗಳೂ 1 ಗುರುವೂ ಇರಬೇಕು. ಉಳಿದ ಪಾದಗಳಲ್ಲಿ ಮೊದಲು ರತಿಗಣಗಳಿದ್ದು ಆಮೇಲೆ ಮದನಗಣಗಳಿರಬೇಕು. ಪ್ರತಿಪಾದದಲ್ಲಿ 22 ಮಾತ್ರೆಗಳಿರಬೇಕು. ಪಾದಾಂತದಲ್ಲಿ ಯತಿ ಇರಬೇಕು. ಇದು ಮದನವತೀ ವೃತ್ತ.

**ಟಿಪ್ಪಣಿ** :– ಪ್ರತಿಪಾದದಲ್ಲಿ ರ ತಿ ಗ ಣ ಗ ಳೆ ಷ್ಟು ? ಮದನಗಣಗಳೆಷ್ಟು ? ಎಂಬುದನ್ನು ಹೇಳಿಲ್ಲ. ಒಟ್ಟಿನಲ್ಲಿ ಒಂದೊಂದು ಪಾದದಲ್ಲಿ 22 ಮಾತ್ರೆಗಳಿರಬೇಕೆಂಬುದು ನಿಯಮ. ಕೃತಿ = ಕೃತಿಛಂದಸ್ಸು, 20 ಸಂಖ್ಯೆಗೆ ಸಂಜ್ಞೆ.

ರಗಣೋ ದ್ವಿತೀಯೇಽಷಷ್ಠೇ ಚ
ಲಗಣೋ ಧಗಣೋ ವಾನ್ಯತ್ರ ಪಂಚಸ್ವರ್ಧಯೋಶ್ಚ
ತ್ರಿಗಣೋಽಯುಕ್ ಸಮಪಾದೋಬ್ಧಿಗಣೋ
ನಿಗದಿತಾ ಗೀತಿಕಾಲಂಕಾರೇ ಪ್ರಭುಸೇನೀಯೈಃ – 20

**ಅರ್ಥ** :– ಎರಡು ಅರ್ಧಗಳಲ್ಲಿಯೂ 2 ಮತ್ತು 6 ನೆಯ ಗಣಗಳು ರಗಣ ಎಂದರೆ ರತಿಗಣವಾಗಿರಬೇಕು. ಉಳಿದ 5 ಗಣಗಳು ಲಗಣವೊ ಧಗಣವೊ ಆಗಿರಬಹುದು (ರತಿಗಣವೂ ಆಗಿರಬಹುದು). ಬೆಸ ಪಾದಗಳಲ್ಲಿ ಒಟ್ಟು 3 ಗಣಗಳಿರಬೇಕು. ಸಮಪಾದಗಳಲ್ಲಿ 4 ಗಣಗಳಿರಬೇಕು. ಇದನ್ನು ಪ್ರಭುಸೇನೀಯರು 'ಗೀತಿಕಾ' ಎಂದು ಗಣಿಸಿದ್ದಾರೆ.

ಆದಿಗುರುಪೂರ್ವಶ್ಚೇತ್‌ಪಾದೋ ಗುರುಪೂರ್ವಕಾಸ್ತಥಾನ್ಯೇ ಜಾತೌ
ಪಾದೋ ಲಘುಪೂರ್ವಶ್ಚೇದಾದಿಃ ಶೇಷಾಸ್ತಥೈವ ಭಾಷಾವಿಷಯೇ – 21

**ಅರ್ಥ :–** ಭಾಷಾವಿಷಯದಲ್ಲಿ ಜಾತಿವೃತ್ತಗಳ ಮೊದಲನೆಯ ಪಾದವು ಗುರು ಪೂರ್ವವಾಗಿದ್ದರೆ ಉಳಿದ ಪಾದಗಳೂ ಗುರುಪೂರ್ವಗಳಾಗಿರಬೇಕು. ಲಘು ಪೂರ್ವವಾಗಿದ್ದರೆ ಉಳಿದ ಪಾದಗಳೂ ಲಘುಪೂರ್ವವಾಗಿರಬೇಕು.

ಕಿಮೇತಾವಂತಿ ಪದ್ಯಾನಿ ಚೇಹಾನುಕ್ತಾನ್ಯನೇಕಧಾ
ಸಂತಿ ಷಟ್‌ಪ್ರತ್ಯಯೇ ತಾನಿ ದೃಶ್ಯಂತೇ ಸೂಚಿತಾನಿ ಚ – 22

**ಅರ್ಥ :–** ಕನ್ನಡಭಾಷೆಯಲ್ಲಿ ಇಷ್ಟೇ ಪದ್ಯಗಳೊ ? ಇಲ್ಲಿ ಹೇಳದಿರುವ ಎಷ್ಟೋ ಪದ್ಯಜಾತಿಗಳು ಕಂಡು ಬರುತ್ತವೆಯಲ್ಲ ! ಹೌದು. ಕಂಡು ಬರುತ್ತವೆ. ಅವುಗಳನ್ನು ಷಟ್‌ಪ್ರತ್ಯಯಗಳಲ್ಲಿ ಸೂಚಿಸಲಾಗಿದೆ.

## II

### ಜಾನಾಶ್ರಯೀ ಛಂದೋವಿಚಿತಿ :

(ಪ್ರಥಮಾಧ್ಯಾಯದ 11 ನೆಯ ಸೂತ್ರದಿಂದ)

ಉಕಾಲೋ ಲಘು – 11

ಉ ಇತ್ಯೇವಂಕಾಲಃ ಸ್ವರೋ ಲಘುಸಂಜ್ಞೋಭವತಿ । ಕಾಲೋ ಮಾತ್ರಾ । ಸತ್ವಕ್ಷಿನಿಮೇಷಃ ಅಂಗುಲಿಸ್ಫೋಟೋ ವಾ ॥

**ಅರ್ಥ :–** 'ಉ' ಎಂಬುದರ ಉಚ್ಚಾರಣೆಗೆ ಹಿಡಿಯುವ ಕಾಲದಷ್ಟು ಕಾಲವುಳ್ಳ ಸ್ವರಕ್ಕೆ ಲಘು ಎಂದು ಹೆಸರು. ಕಾಲವೆಂದರೆ ಮಾತ್ರೆ. ಅದು ಕಣ್ಣು ಮುಚ್ಚಲು ತಗುಲುವಷ್ಟು ಅಥವಾ ಚಿಟಿಕೆಹೊಡೆಯುವಷ್ಟು ಕಾಲ.

**ಟಿಪ್ಪಣಿ :–** 'ಊಕಾಲೋಽಜ್‌ಹ್ರಸ್ವದೀರ್ಘಪ್ಲುತಃ' ಎಂಬ ಪಾಣಿನಿಸೂತ್ರವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಅಕ್ಷರಮಾಲೆಯ ಆದಿಯಲ್ಲಿರುವ ಅಕಾರವನ್ನು ಬಿಟ್ಟು ಉಕಾರವನ್ನು ಹೇಳುವುದಕ್ಕೆ ಕಾರಣವೇನೆಂದರೆ, ಕೋಳಿ ಕೂಗುವಾಗ 'ಉ ಊ ಊ಼' ಎಂದು ಕೂಗುತ್ತದೆ. ಇದರಲ್ಲಿ ಹ್ರಸ್ವ, ದೀರ್ಘ, ಪ್ಲುತ – ಈ ಮೂರಕ್ಕೂ ಉದಾಹರಣೆ ಇದೆ. ಇದು ಸುಬೋಧವಾದ ಉದಾಹರಣೆ. ಪಾಣಿನಿಯನ್ನನುಸರಿಸಿ ಇಲ್ಲಿಯೂ ಉಕಾರವನ್ನು ಗ್ರಹಿಸಿದ್ದಾರೆ.

ಸಂಯೋಗಾಯೋಗವಾಹಪರೋ ಗುರುಃ – 12

ಸಂಯೋಗಾಶ್ಚ ಆಯೋಗವಾಹಾಶ್ಚ ಸಂಯೋಗಾಯೋಗವಾಹಾಃ। ತೇ ಪರೇ ಯಸ್ಯ ಉಕಾಲಸ್ಯ ಸ ಸಂಯೋಗಾಯೋಗವಾಹಪರಃ । ಸ ಗುರುಸಂಜ್ಞೋ ಭವತಿ।

ಕಃ ಸಂಯೋಗಃ ? ವ್ಯಂಜನಾನ್ಯನಂತರಾಣಿ ಭವಂತಿ । ಕೇ ಅಯೋಗವಾಹಾಃ ? ವಿಸರ್ಜನೀಯ – ಜಿಹ್ವಾಮೂಲೀಯೋಪಧ್ಮಾನೀಯಾನುಸ್ವಾರಾಃ । ತತ್ರ ಸಂಯೋಗ ಪರಾಸ್ತಾವತ್ – ಅಕ್ಷಃ ಕಕ್ಷಃ ಇತ್ಯಕಾರಃ, ಋಕ್ಷಃ, ವೃಕ್ಷಃ ಇತಿಯು ಕಾರಃ । ಅಯೋಗವಾಹಪರೋಽಪಿ – ಕಃ ಕರೋತಿ – ಕಃ ∧ ಕ ರೋ ᳵ ತಿ, ಕಃ ಪಚತಿ – ಕ ∧ ಪಚತಿ, ತ್ವಂಯಾಸಿ ॥

**ಅರ್ಥ** :– ಸಂಯೋಗಗಳು ಮತ್ತು ಅಯೋಗವಾಹಗಳು. ಅವು ಯಾವ ಉಕಾಲಸ್ವರದ ಮುಂದಿವೆಯೊ ಆ ಸ್ವರವೇ ಸಂಯೋಗಾಯೋಗವಾಹಪರ. ಅದು ಗುರುವೆನಿಸುತ್ತದೆ. ಸಂಯೋಗ ಯಾವುದು ? ವ್ಯವಧಾನವಿಲ್ಲದಂತೆ ಸೇರಿಕೊಂಡಿರುವ ವ್ಯಂಜನಗಳೇ ಸಂಯೋಗ. ಅಯೋಗವಾಹಗಳು ಯಾವುವು ? ವಿಸರ್ಗ, ಜಿಹ್ವಾಮೂಲೀಯ, ಉಪಾಧ್ಮಾನೀಯ ಮತ್ತು ಅನುಸ್ವಾರ. ಸಂಯೋಗಪರಗಳಿಗೆ ಉದಾಹರಣೆ :– ಅಕ್ಷಃ, ಕಕ್ಷಃ – ಇಲ್ಲಿ ಅಕಾರ; ಋಕ್ಷಃ, ವೃಕ್ಷಃ – ಇಲ್ಲಿ ಋಕಾರ. ಅಯೋಗಪರವಾವುದೆಂದರೆ : ಕಃ ಕ ರೋ ᳵ ತಿ – ಕ ∧ ಕರೋತಿ, ಕಃ ಪಚತಿ – ಕ∧ಪಚತಿ, ತ್ವಂಯಾಸಿ.

**ಟಿಪ್ಪಣಿ** :– ಕ ಖ ಕಾರಗಳ ಹಿಂದೆ ವಿಸರ್ಗಕ್ಕೆ ಅರ್ಧಕಕಾರದಂತಹ ಉಚ್ಚಾರಣೆಯುಂಟು. ಅದು ಜಿಹ್ವಾಮೂಲೀಯ. ಪ, ಫ ಕಾರಗಳ ಹಿಂದಿನ ವಿಸರ್ಗಕ್ಕೆ ಅರ್ಧ ಪಕಾರದ ಉಚ್ಚಾರಣೆಯುಂಟು. ಅದು ಉಪಧ್ಮಾನೀಯ.

ಪಾದಾಂತೇ ವಾ – 13

ಪಾದಾಂತೇ ವರ್ತಮಾನಶ್ಚ ಉಕಾಲೋ ವಾ ಗುರುಸಂಜ್ಞೋ ಭವತಿ । ತದ್ಯಥಾ –

ಸ್ವಾಧೀನಸುಲಭಮೇತ
  ನ್ನಿರ – ವದ್ಯಂ ವಿದ್ಯತೇ ಮಮೈವ ಖಲು
ಅತಿಥಿಜನಪ್ರತಿಪೂಜನ –
  ಸಮರ್ಥರೂಪಂ ಶರೀರಧನಮ್.

ಅಸ್ಯಾಶ್ಚಾರ್ಯಾಯಾ ಆದ್ಯಸ್ಯಾರ್ಧಸ್ಯಾಂತ್ಯಸ್ವರೋಽನೇನ ಲಕ್ಷಣೇನ ಗುರುರ್ಭವತಿ । ಅನ್ಯಥಾ ಆರ್ಯೇಯಂ ನ ಸ್ಯಾತ್ । ಹೀನಮಾತ್ರತ್ವಾತ್ ಇತಿ । ವಾಶಬ್ದೋ ವಿಕಲ್ಪವಾಚೀ । ಕ್ವಚಿ ನ್ನಭವತಿ । ತದ್ಯಥಾ – ಅಸ್ಯಾ ಏವ ಪ್ರಥಮ ತೃತೀಯಯೋಃ ಪಾದಯೋಃ । ಯದಿ ತತ್ರಾಪಿ ಗುರುತ್ವಂ ಸ್ಯಾತ್ ಆರ್ಯೇವೇಯಂ ನ ಸ್ಯಾತ್, ಅಧಿಕಮಾತ್ರತ್ವಾದಿತಿ ॥

**ಅರ್ಥ :–** ಪಾದಾಂತದಲ್ಲಿರುವ ಉಕಾಲವಾದ – (ಎಂದರೆ ಹ್ರಸ್ವವಾದ) ಸ್ವರವು ವಿಕಲ್ಪವಾಗಿ ಗುರುವೆನಿಸುತ್ತದೆ. ಹೇಗೆಂದರೆ :

'ಸ್ವಾಧೀನ ಸುಲಭಮೇತತ್
ನಿರವದ್ಯಂ ವಿದ್ಯತೇ ಮಮೈವ ಖಲು

ಎಂಬ ಮೇಲ್ಕಂಡ ಆರ್ಯಾವೃತ್ತದ ಪ್ರಥಮಾರ್ಧದ ಕಡೆಯ ಸ್ವರವು ಈ ಲಕ್ಷಣ ದಿಂದ 'ಗುರು' ಎನಿಸಿಕೊಳ್ಳುತ್ತದೆ. ಇಲ್ಲದೆ ಇದ್ದರೆ ಇದು ಆರ್ಯೆಯಾಗಲಾರದು. ಏಕೆಂದರೆ, ಒಂದು ಮಾತ್ರೆ ಕಡಮೆಯಾಗುತ್ತದೆ. 'ವಾ' ಎಂದರೆ ವಿಕಲ್ಪ. ಕೆಲ ವೆಡೆ ಇದು (ಪಾದಾಂತದಲ್ಲಿರುವ ಹ್ರಸ್ವವು) ಗುರುವಾಗುವುದಿಲ್ಲ; ಹೇಗೆಂದರೆ ಇದೇ ಆರ್ಯೆಯ ಪ್ರಥಮ ತೃತೀಯ ಪಾದಗಳಲ್ಲಿ (ಕಡೆಯ ಹ್ರಸ್ವವನ್ನು ಗುರು ಎಂದು ಗಣಿಸತಕ್ಕದ್ದಲ್ಲ). ಅಲ್ಲಿ ಗುರುವೆನಿಸಿದರೆ, ಇದು ಆರ್ಯೆಯಾಗಲಾರದು. ಏಕೆಂದರೆ, ಒಂದು ಮಾತ್ರೆ ಅಧಿಕವಾಗುತ್ತದೆ.

**ಟಿಪ್ಪಣಿ :–** ಈ ವ್ಯಾಖ್ಯಾಕಾರನ ಮತದಂತೆ ಆರ್ಯಾವೃತ್ತವನ್ನೂ ನಾಲ್ಕು ನಾಲ್ಕು ಪಾದಗಳನ್ನಾಗಿ ವಿಂಗಡಿಸಬಹುದು. ಒಂದೊಂದು ಪಾದದಲ್ಲಿ ಹತ್ತು ಅಕ್ಷರಗಳಿರಬೇಕು. (42ನೆಯ ಸೂತ್ರದ ವ್ಯಾಖ್ಯಾನವನ್ನು ನೋಡಿ)

ಊಕಾಲಃ – 14

ಊಕಾಲಶ್ಚ ಸ್ವರೋ ಗುರುಸಂಜ್ಞೋ ಭವತಿ । ಅತ್ರಾಹ – ಊಕಾಲೋ ದೀರ್ಘೋ ದ್ವಿಮಾತ್ರಃ, ತ್ರಿಮಾತ್ರಸ್ತು ಪ್ಲುತಃ, ಕಂ ಲಘುರ್ವೋಗುರವ ಇತಿ । ತತ್ರೋಚ್ಯತೇ– ಊ ಇತ್ಯೇವಂ ಸಂಹಿತಾಕರಣಾತ್ ದೀರ್ಘಪ್ಲುತಯೋರ್ಗ್ರಹಣಂ ಭವತಿ ॥

**ಅರ್ಥ :–** ಊಕಾಲವುಳ್ಳ ಸ್ವರವು ಗುರುಸಂಜ್ಞೆಯನ್ನು ಪಡೆಯುತ್ತದೆ, ಇಲ್ಲಿ ಯಾರೊಬ್ಬನೂ ಹೀಗೆ ಕೇಳಬಹುದು : ಊಕಾಲವಾದ ದೀರ್ಘವು ದ್ವಿಮಾತ್ರ ವಾಗಿದೆ. ಪ್ಲುತವಾದರೋ ತ್ರಿಮಾತ್ರ. ಹೀಗಿರುವಾಗ ಪ್ಲುತಗಳು ಲಘುಗಳೊ ಗುರುಗಳೊ ? ಈ ಪ್ರಶ್ನೆಗೆ ಉತ್ತರ ಹೇಳಲಾಗುತ್ತದೆ : ಊ ಎಂಬಲ್ಲಿ (ದೀರ್ಘ ಮತ್ತು ಪ್ಲುತಗಳಿಗೆ) ಸವರ್ಣದೀರ್ಘಸಂಧಿಯಾಗಿರುವುದರಿಂದ ದೀರ್ಘಪ್ಲುತಗಳೆ ರಡಕ್ಕೂ ಗ್ರಹಣವಾಗುತ್ತದೆ.

**ಟಿಪ್ಪಣಿ :–** ಊ+ಊ ಎಂದು ಬಿಡಿಸಬೇಕು. ಸೂತ್ರದಲ್ಲಿ 'ಊ' ಎಂದು ಸವರ್ಣ ದೀರ್ಘಸಂಧಿಯಾಗಿದೆ. ಆದ್ದರಿಂದ ಇವೆರಡೂ ಗುರುಗಳು.

ತೌ ಹಭೌ – 15

ತೌ ಲಘುಗುರೂ ಯಥಾಕ್ರಮೇಣ 'ಹ' 'ಭ' ಇತ್ಯೇವಂ ಸಂಜ್ಞಾ ಭವತಃ

ಆ ಲಘು ಮತ್ತು ಗುರುಗಳಿಗೆ ಕ್ರಮವಾಗಿ 'ಹ' ಎಂದೂ 'ಭ' ಎಂದೂ ಸಂಜ್ಞೆ ಗಳು.

ತಚ್ಛೇದೋ ರಗವತೌ – 16

ತಯೋರ್ಲಘು ಗುರ್ವೋಃ ಛೇದೋ ರ ಇವ ಗಕಾರ ಇವ ಚ ಭವತಿ ॥

**ಅರ್ಥ** :– ಆ ಲಘುಗುರುಗಳ ಛೇದವು ರಕಾರದಂತೆ ಮತ್ತು ಗಕಾರದಂತೆ ಇರುತ್ತದೆ.

**ಟಿಪ್ಪಣಿ** :– ಛೇದವೆಂದರೆ ಪರಿಚ್ಛೇದ, ಚಿಹ್ನೆ. ಅದರ ಸ್ವರೂಪವು ದೇವ ನಾಗರೀಲಿಪಿಯ र ಮತ್ತು ग ದಂತೆ. ಲಘು = ।; ಗುರು = ⌣ ಹೀಗಿರ ಬಹುದು.*

ಸೋಽಙ್ಗುಲೇಽಙ್ಗುಲೇ – 17

ಸ ಹಭಯೋಃ ಛೇದೋಽಙ್ಗುಲೇಽಙ್ಗುಲೇ ಕರ್ತವ್ಯಃ । ಅಂಗುಲ್ಯಾಸಮ್ಮಿತ ಮಂಗುಲಮ್ । ಅಸ್ಯಾರಂಭೋ ಹ್ಯುತ್ತರಾರ್ಥಃ ॥

**ಅರ್ಥ** :– ಲಘುಗುರುಗಳ ಛೇದವನ್ನು ಒಂದೊಂದು ಅಂಗುಲ ಪ್ರಮಾಣದ ಸ್ಥಳದಲ್ಲಿ ಗುರುತಿಸಬೇಕು. ಅಂಗುಲಿಯಿಂದ ಪರಿಮಿತವಾದ ಸ್ಥಳ ಅಂಗುಲ, ಇದನ್ನು ಹೇಳಿರುವುದು ಮುಂದೆ ಬೇಕಾಗುತ್ತದೆಯಾದ್ದರಿಂದ.

**ಟಿಪ್ಪಣಿ** :– ಒಂದು ಅಂಗುಲದಷ್ಟು ಸ್ಥಳದಲ್ಲಿ ಲಘುವನ್ನೂ ಗುರುವನ್ನೂ ಗುರುತಿಸಬೇಕು. ಮುಂದೆ ಷಟ್‌ಪ್ರತ್ಯಯಗಳಲ್ಲಿ ಅಧ್ವಯೋಗ ಎಂಬುದೊಂದುಂಟು. ಇದು ಆಯಾ ಛಂದಸ್ಸಿನ ಪ್ರಸ್ತಾರವನ್ನು ಹಾಕಲು ಉದ್ದಗಲದ ಸ್ಥಳವು ಎಷ್ಟು ಬೇಕೆಂಬುದನ್ನು ತಿಳಿಸುವ ವಿಧಾನ.

---

* ಇಲ್ಲಿ ಬಳಸಿರುವಂತೆ ⌣ ; –.

## ಗಣಗಳು

### ಸೂತ್ರ 18 ರಿಂದ 35 ರವರೆಗೆ.

| | |
|---|---|
| ಗಂಗಾಸ್ | – – |
| ನದೀಜ್ | ⏑ – |
| ಚಂದ್ರುಪ್ | – ⏑ |
| ನನುರ್ | ⏑ ⏑ |
| ನಚರತಿದ್ | ⏑ ⏑ ⏑ ⏑ |
| ಕಮಲಿನೀಯ್ | ⏑ ⏑ ⏑ – |
| ಜಯನರವರಣ್ | ⏑ ⏑ ⏑ ⏑ ⏑ ⏑ |
| ನೂನಂಸಾಗ್ | – – – |
| ಕೃಶಾಂಗೀಜ್ | ⏑ – – |
| ಧೀವರಾಶ್ | – ⏑ – |
| ಕುರುತೇಲ್ | ⏑ ⏑ – |
| ತೇಶ್ರೀಃ ಕ್ವಬ್ | – – ⏑ |
| ವಿಭಾತಿಕ್ | ⏑ – ⏑ |
| ಸಾತವತ್ | – ⏑ ⏑ |
| ತರತಿವ್ | ⏑ ⏑ ⏑ |
| ಲೋಲಮಾಲಾಷ್ | – ⏑ – – |
| ಧೈರ್ಯಮಸ್ತುತೇಟ್ | – ⏑ – ⏑ – |
| ರೌತಿಮಯೂರೋಞ್ | – ⏑ ⏑ – – – * |

ತೇ ‡ ದ್ವಿಕ – ಚತುಷ್ಕ – ಷಟ್ಕ – ತ್ರಿಕ – ಪಂಚಕವರ್ಣ
ಕಾಃ ವೃತ್ತವಿಧಾನೇ ಗ್ರಂಥಲಾಘವಾರ್ಥಂ ಪರಿಗೃಹೀತಾಃ

ಅರ್ಥ :– 2, 4, 6, 3, 5 ವರ್ಣಗಳಿರುವ ಈ ಸಂಜ್ಞಾಸೂತ್ರಗಳು ಗ್ರಂಥ ಲಾಘವಕ್ಕಾಗಿ ಸ್ವೀಕರಿಸಲ್ಪಟ್ಟಿವೆ.

ಅಂತೇऽಂತ ಉಕ್ತಾನಿ ವ್ಯಂಜನಾನ್ಯೇಷಾಂ ಸಂಜ್ಞಾ – 36

* ಒಟ್ಟು ಹದಿನೆಂಟು ಗಣಗಳು.

‡ 2. 6 ಅಕ್ಷರಗಣಗಳನ್ನು ಈತನು ನಿರ್ದೇಶಿಸುತ್ತಾನೆ.

ಉಕ್ತಾನಾಂ ಸೂತ್ರಾಣಾಮಂತೇಽಂತೇ ಪರಿಗೃಹೀತಾನಿ ವ್ಯಂಜನಾನಿ ಉಕ್ತಾನಾಂ ವರ್ಣಾನಾಂ ತಥಾರಚನಾನಾಂ ಸಂಜ್ಞಾ ಭವಂತಿ ॥

**ಅರ್ಥ :**— ಹಿಂದೆ ಹೇಳಿದ ಸೂತ್ರಗಳ ಕಡೆಯಲ್ಲಿ ಹೇಳಿರುವ ಸ್, ಜ್, ಮೊದಲಾದ ವ್ಯಂಜನಗಳು ಆ ಸೂತ್ರದಲ್ಲಿರುವ ವರ್ಣರಚನೆಗಳಿಗೆ ಸಂಜ್ಞೆಗಳಾಗುತ್ತವೆ.*

**ಟಿಪ್ಪಣಿ :**— ಗಂಗಾಶ್. ಶ್ ಎಂದರೆ ಎರಡು ಗುರುಗಳಿರುವ ಗಣವೆಂದರ್ಥ. ಜ್ ಎಂದರೆ ಒಂದು ಲಘು ಒಂದು ಗುರು ಇರುವ ಎರಡಕ್ಷರಗಳ ಗಣವೆಂದರ್ಥ,

ಆದಿಸ್ವರೈಶ್ಚ ಗಾದಿಸಂಜ್ಞಾಃ — 37

ಗಾದಯೋ 'ನೂನಂಸಾಗ್' (ಸೂ. 25) ಇತ್ಯೇವಮಾದಯಃ ತೇಷಾಂ ಯ ಆದೌ ವರ್ತಮಾನಾಃ ಸ್ವರಾಃ ಆದಯ್ಯುಕ್ತೈಶ್ಚ ಅಂತೇ ಅ ೦ ತೇ ೯ ಉಕ್ತೈಃ ವ್ಯಂಜನೈಶ್ಚ ಸಂಜ್ಞಾ ಭವಂತಿ ॥

**ಅರ್ಥ :**— 'ನೂನಂಸಾಗ್' ಮೊದಲಾದ ಮುಂದಿನ ಸೂತ್ರಗಳು 'ಗಾದಿಗಳು.' ಅವುಗಳ ಆದಿಯಲ್ಲಿ ಇರುವ ಊಕಾರಾದಿ ಸ್ವರಗಳಿಂದಲೂ ಕಡೆಯಲ್ಲಿರುವ ವ್ಯಂಜನಗಳಿಂದಲೂ ಆಯಾ ವರ್ಣಸಮುದಾಯಗಳ ಸಂಜ್ಞೆ ಏರ್ಪಡುತ್ತದೆ.

**ಟಿಪ್ಪಣಿ :**— 25ನೆ ಸೂತ್ರದವರೆಗೆ ಅಂತ್ಯವರ್ಣಗಳಿಂದ ಮಾತ್ರ ಸಂಜ್ಞೆ, 'ನೂನಂಸಾಗ್' ಮೊದಲಾದ ಸೂತ್ರಗಳಿಂದಲಾದರೊ ಮೊದಲನೆಯ ಸ್ವರದಿಂದಾಗಲಿ ಕಡೆಯ ವ್ಯಂಜನದಿಂದಾಗಲಿ ಸಂಜ್ಞೆ ಏರ್ಪಡುತ್ತದೆ. ಉದಾ :— 'ಊ' ಎಂದರೂ 'ಗ್' ಎಂದರೂ ಮೂರು ಗುರುಗಳಿರುವ ವರ್ಣಸಮೂಹದ ಸಂಜ್ಞೆ. 'ಈ' ಎಂದರೂ 'ಶ್' ಎಂದರೂ ಮಧ್ಯಲಘುವಿರುವ ವರ್ಣಸಮೂಹಕ್ಕೆ ಸಂಜ್ಞೆ— ಇತ್ಯಾದಿ.

ಗಣಾಶ್ಚತುರ್ಹಾಃ — 38

ಯೇ ಚತುರ್ಲಘವೋ ವರ್ಣಸಮೂಹಾಃ ತೇ ಗಣಸಂಜ್ಞಾ ಭವಂತಿ ॥

**ಅರ್ಥ :**— 4 ಲಘುಗಳಿರುವ ವರ್ಣಸಮುದಾಯಕ್ಕೆ 'ಗಣ' ಎಂದು ಹೆಸರು.

ಪಂಚಹಾಶ್ಚ — 39

ಪಂಚಲಘವಶ್ಚ ಗಣಸಂಜ್ಞಾ ಭವಂತಿ ।

---

* ಇವನ್ನು ಇತ್ ಸಂಜ್ಞೆಗಳು ಎನ್ನುವುದುಂಟು.

**ಟಿಪ್ಪಣಿ :–** ಈ ಗ್ರಂಥಕಾರನು ಹಿಂದೆ ಹೇಳಿದ ಸೂತ್ರಗಳಲ್ಲಿರುವ ಎಲ್ಲ ವರ್ಣಸಮೂಹವನ್ನೂ ಗಣವೆಂದು ಕರೆಯುವುದಿಲ್ಲ, 38, 39ನೆ ಸೂತ್ರಗಳಲ್ಲಿ ಹ=ಲಘು ಎಂದರೆ ಮಾತ್ರೆಯೆಂದರ್ಥ. ನಾಲ್ಕು ಮಾತ್ರೆಗಳಿರುವ ವರ್ಣಸಮುದಾಯಕ್ಕೂ ಐದು ಮಾತ್ರೆಗಳಿರುವ ವರ್ಣಸಮುದಾಯಕ್ಕೂ ಗಣವೆಂದು ಹೆಸರಿಟ್ಟಿದ್ದಾನೆ. ಆದ್ದರಿಂದ 'ಪಂಚಲಘುವಸ್ತ್ವಷ್ಟವಿಧಾಃ' ಎಂಬ ವ್ಯಾಖ್ಯಾನವು ಸಂಗತವಾಗುತ್ತದೆ. ಈ ಪಂಚಮಾತ್ರೆಗಳಿರುವ ಗಣಗಳನ್ನು ಯಾವ ಸ್ಥಾನದಲ್ಲಿ ಹೇಳಿದ್ದಾರೋ ಅಲ್ಲಿ ಮಾತ್ರವೇ ಆ ಗಣಗಳು ಬರುತ್ತವೆ. ಇನ್ನೆಲ್ಲಿಯೂ ಅವು ಬರುವುದಿಲ್ಲ ಎಂದು ಸೂಚಿಸುವುದಕ್ಕಾಗಿ ಸೂತ್ರದಲ್ಲಿ 'ಚ' ಶಬ್ದವನ್ನು ಹೇಳಲಾಗಿದೆ ಎಂಬುದು ವ್ಯಾಖ್ಯಾನದ ತಾತ್ಪರ್ಯ. ಉದಾಹರಣೆಗೆ, ನಿರ್ಧಾಯಿಕಾ ವೃತ್ತದಲ್ಲಿ ನಾಲ್ಕು ಗಣಗಳಿರಬೇಕೆಂದು ಹೇಳಿದೆ. 'ಘೌ ವಾನ್ತ್ಯಃ' ಎಂಬ ಸೂತ್ರದಿಂದ ಅದರಕಡೆಯಲ್ಲಿ ಘ್ ಅಥವಾ ಕ್ಷ್ ಗಣವು ಬರುತ್ತದೆಯೆಂದು ಹೇಳಿದೆ. ಈ ಎರಡು ಗಣಗಳು ಅಂತ್ಯದಲ್ಲಿಯೇ ಹೊರತು ಉಳಿದೆಡೆ ಬರುವುದಿಲ್ಲ.

ಯತಿಃ ಪದಚ್ಛೇದಃ – 40

ಯತಿರವಧಿಃ ಛೇದ ಇತಿ ಪರ್ಯಾಯಾಃ। ಪದಸ್ಯ ಛೇದಃ ಪದಚ್ಛೇದಃ। ಸತು ಯತಿಸಂಜ್ಞೋ ಭವತಿ॥

**ಅರ್ಥ :–** ಯತಿ, ಅವಧಿ, ಛೇದ – ಇವು ಪರ್ಯಾಯಪದಗಳು. ಪದದ ಛೇದವು ಯತಿಯೆನಿಸಿಕೊಳ್ಳುತ್ತದೆ.

ಸಾ ಪಾದಾಂತೇ – 41

ಆ ಯತಿಯು ಪಾದದ ಕಡೆಯಲ್ಲಿ ಬರುತ್ತದೆ.

ಜಾತಿಷು ಯುಜೋಽವಶ್ಯಮ್ – 42

ಆರ್ಯಾದಿ ಜಾತಿವೃತ್ತಗಳಲ್ಲಿ ಯತಿಯು ಸಮಪಾದದ ಕಡೆಯಲ್ಲಿ ಇದ್ದೇ ಇರಬೇಕು. ವಿಷಮ ಪಾದಗಳ ಕಡೆಯಲ್ಲಿ ಇರಲೇ ಬೇಕೆಂಬ ನಿಯಮವಿಲ್ಲವೆಂದು ಅರ್ಥಾತ್ ಸಿದ್ಧವಾಗುತ್ತದೆ. ಹೇಗೆಂದರೆ,

ಸ್ವಾಧೀನಸುಲಭಮೇತನ್ನಿರ – 14
  ವದ್ಯಂ ವಿದ್ಯತೇ ಮಮೈವ ಖಲು । – 15
ಅತಿಥಿಜನಪ್ರತಿಪೂಜನ – 12
  ಸಮರ್ಥರೂಪಂ ಶರೀರಧನಮ್ – 15

ಈ ಆರ್ಯೆಯು ಪಂಕ್ತಿಚ್ಛಂದಸ್ಸಿನಲ್ಲಿ ಬರುತ್ತದೆ. ಇದರ ಒಂದೊಂದು

ಪಾದದಲ್ಲಿ ಹತ್ತು ಅಕ್ಷರಗಳಿರುತ್ತವೆ. ಬೆಸವಾದ 1ನೇ ಪಾದದ ಕಡೆಯಲ್ಲಿ ಯತಿ ಇಲ್ಲ. ಸಮವಾದ 2ನೇ ಪಾದದ ಕಡೆಯಲ್ಲಿ ಯತಿ ಇದೆ. ಆದ್ದರಿಂದ ಯತಿ ಇರಬೇಕೆಂಬ ನಿಯಮ ಸಮಪಾದಗಳಿಗೆ ಮಾತ್ರ.

**ಟಿಪ್ಪಣಿ :–** ಸಾಮಾನ್ಯವಾಗಿ ಆರ್ಯಾಮಾತ್ರಛಂದ ಎನ್ನುವುದುಂಟು. ಹಾಗೆ ವಿಭಾಜಿಸಿದರೆ ಈ ಪದ್ಯದ ರಚನೆ :

ಸ್ವರೈಃ ಸನ್ಯೈಃ – 43

ಮುಂದೆ ಲಕ್ಷಣಗಳನ್ನು ಹೇಳುವಾಗ ನ ಕಾ ರ ಸ ಹಿ ತ ವಾ ದ ಸ್ವರಗಳಿಂದ ಯತಿಯು ಎಲ್ಲಿ ಬರಬೇಕೆಂಬುದನ್ನು ತಿಳಿಸಲಾಗುತ್ತದೆ. ಉದಾಹರಣೆಗೆ, 'ಮಂದಾಕ್ರಾಂತಾ ಸೇರುಶೋನೀನೂ' (4 – 86) ಎಂಬ ಲಕ್ಷಣವಿದೆ. ಅದರಲ್ಲಿ (ನೀ–4) ನೆ ಸ್ವರವಾದ ಈಕಾರವೂ 6ನೆ ಸ್ವರವಾದ (ನೂ) ಊಕಾರವೂ ನಕಾರದೊಡನೆ ಉಕ್ತವಾಗಿವೆ. ಆದ್ದರಿಂದ ಮಂದಾಕ್ರಾಂತಾವೃತ್ತದಲ್ಲಿ 4 ಮತ್ತು ಅಲ್ಲಿಂದ 6ನೇ ಅಕ್ಷರದಲ್ಲಿ ಎಂದರೆ, 10 ರಲ್ಲಿ (4+6) ಯತಿ ಬರುತ್ತದೆ.

ಉದಾ :–

4 6/10
ಕಶ್ಚಿತ್‌ಕಾಂತಾ ವಿರಹಗುರುಣಾ ಸ್ವಾಧಿಕಾರಾತ್ಪ್ರಮತ್ತಃ ॥

ದ್ವಿನಾಂತೈ : – 44

ಸ್ವರವು ನಕಾರಾಂತವಾಗಿ ಹೇಳಲ್ಪಟ್ಟರೆ – ಎಂದರೆ 2 ನಕಾರಗಳ ಮಧ್ಯದಲ್ಲಿ ಹೇಳಲ್ಪಟ್ಟರೆ (2ನೆಯ ನಕಾರದ ಮುಂದೆ ಸ್ವರವಿರಬಾರದು), ಆಗ ಯತಿ ಆ ಸ್ಥಾನಗಳಲ್ಲಿ ಎರಡು ಸಲ ಬರುತ್ತದೆ.

**ಟಿಪ್ಪಣಿ :–** 'ನುನ್' ಎಂದರೆ 5ನೇ ಸ್ವರವಾದ ಉಕಾರವು 2 ನಕಾರಗಳ ಮಧ್ಯದಲ್ಲಿ ಹೇಳಲ್ಪಟ್ಟಂತಾಯಿತು. ಆಗ ಪಾದದ 5 ರಲ್ಲಿ ಮತ್ತೆ ಅಲ್ಲಿಂದ 5 (10) ರಲ್ಲಿ ಯತಿ ಬರುತ್ತದೆ. ಉದಾ :–

ಉದ್ಗತಾ ರೀರಿ ಮ್ಪ್ರ್ಯ ತಜುಲಿರ್ಯೈ ನೇನ್ ॥

ಇದು ಉದ್ಗತಾವೃತ್ತದ ಲಕ್ಷಣ. ಏಕಾರವು 10 ನೆಯ ಸ್ವರ. ಇದು ಎರಡು ನಕಾರಗಳ ಮಧ್ಯದಲ್ಲಿ ಹೇಳಲ್ಪಟ್ಟಿರುವುದರಿಂದ 10 – 10 ರಲ್ಲಿ ಯತಿ ಇರುತ್ತದೆ. ಹೇಗೆಂದರೆ, ಅಥ ವಾಸವಸ್ಯ ವಚನೇನ ರುಚಿರವದನ ಸ್ತ್ರಿಲೋಚನಮ್ ॥

ಇನ್ನೊಂದು ಉದಾ :–

ಸ್ರಗ್ಧರಾ ಗೋದುಶೋ ನ್ಯನ್

ಇದು ಸ್ರಗ್ಧರಾವೃತ್ತದ ಲಕ್ಷಣ. ಋಕಾರವು 7ನೆಯ ಸ್ವರ. ಈ ವೃತ್ತದಲ್ಲಿ 7 – 7 ರಲ್ಲಿ ಯತಿ ಇರುತ್ತದೆ. ಹೇಗೆಂದರೆ,

7 7(14)

ದಂತಾಗ್ರಪ್ರೋತಚಂಚು ದ್ಯುತಿದನುತನಯಾ ಸ್ರಗ್ವಸಾ ದಿಗ್ಧದೇಹೋ ॥

ಭಾ ಹೌ – 45

ಭಾ=ಗುರು, ಹ=ಲಘು. ಒಂದು ಗುರುವನ್ನು ಎರಡು ಲಘುಗಳೆಂದು ಎಣಿಸಕತ್ಕದ್ದು.

**ಟಿಪ್ಪಣಿ** :– ಲಘು ಎಂದರೆ ಒಂದು ಮಾತ್ರೆ. ಒಂದು ಗುರುವನ್ನು ಎರಡು ಮಾತ್ರೆಗಳೆಂದು ಗಣಿಸತಕ್ಕದ್ದು. ಉದಾ :– ವೈತಾಲೀಯಂ ಚತುರ್ದಶಾಯುಜಿಹಾಃ

ವೈತಾಲೀಯದ 1, 3ನೆ ಪಾದಗಳಲ್ಲಿ 14 ಮಾತ್ರೆಗಳಿರಬೇಕು. ಹೇಗೆಂದರೆ,

'ಅಭಿನಾದಿತಮಂಬರಾದ್‌ಘನೈಃ ಇಲ್ಲಿ ಗುರುವನ್ನು 2 ಮಾತ್ರೆಗಳೆಂದು ಗಣಿಸಿದರೆ ಒಟ್ಟು 14 ಮಾತ್ರೆಗಳಾಗುತ್ತವೆ.

ಸಂಸ್ಕೃತದಲ್ಲಿ ಋಕಾರಕ್ಕೆ ದೀರ್ಘವಿದೆ. ಌ ಕಾರಕ್ಕೆ ದೀರ್ಘವಿಲ್ಲ. ಜನಾಶ್ರಯಿ ಇದನ್ನನುಸರಿಸಿ ಸ್ವರಗಳನ್ನು ಗಣಿಸಿದ್ದಾನೆ. ಏಕಾರವು ಹತ್ತನೆಯ ಅಕ್ಷರ. ಐಕಾರವು ಹನ್ನೊಂದನೆಯ ಅಕ್ಷರ.

ವ್ಯಾಖ್ಯಾಕಾರನು ಉದಾಹರಿಸಿದ ಪದ್ಯಗಳಲ್ಲಿ ಯತಿನಿಯಮವು ಸರಿಯಾಗಿ ಹೊಂದುವುದಿಲ್ಲ. ಉದಾ :–

ಮದ್ರಕಮ್ ತೀಯಿಲ್ಕು ನೈ ॥

ಇದು ಮದ್ರಕವೃತ್ತದ ಲಕ್ಷಣ. ಇದರ ಪ್ರಕಾರ 11 ರಲ್ಲಿ ಯತಿ ಇರಬೇಕು.

ಅಸ್ಯೈವ ನೇ ಪಿಂಗಳಸ್ಯ ॥

ಈ ಮದ್ರಕವೃತ್ತದ 10 ರಲ್ಲಿ ಯತಿ ಇರಬೇಕೆಂದು ಪಿಂಗಳಾಚಾರ್ಯನ ಮತ. ಉದಾಹರಿಸಿದ ಈ ಪದ್ಯದಲ್ಲಿ ಯತಿಭಂಗ ಉಂಟು :–

10 11

ಮೃತ್ಯುಪರಾಯಣೇ ಪರಮದುರ್ಬಲೇ ಜ ಗ ತಿ ತೋಯಬುದ್ಬುದಸಮೇ

10 11

ವ್ಯಾಧಿಜರಾತ್ಮಕೇ ವ್ಯಸನಭಾ ಜನೇ ರುದಿತಶೋಕಶಲ್ಯ ವಿಹತೇ

10 11

ಕ್ರಂದಿತಮೂರ್ಧ್ವಭೋಜವಸಿನಿ ಘ್ನಧೀರಿಹ ಚ ಯತ್ರ ನೋಭಯತ್ರ ಶತಂ

10 11

ತತ್ರ ಗತವ್ಯಥೋ ವಿಷಯ ಗೋಚರಃ ಶಮಯಸೀಂದ್ರಿಯಾಣಿ ನ :

ಈ ಪದ್ಯದ ದ್ವಿತೀಯಾರ್ಧದಲ್ಲಿ ಪಾಠದೋಷವಿದೆ. ವೃತ್ತದ ಲಕ್ಷಣವೂ ಹೊಂದುವುದಿಲ್ಲ.

# ಕನ್ನಡ ಕವಿ ಕಾವ್ಯ ಪರಂಪರೆ

ಇಂಡಿಯ ಬುಕ್ ಹೌಸಿನವರಿಂದ ಪ್ರಕಟವಾಗುತ್ತಿರುವ "ಕನ್ನಡ ಕವಿ ಕಾವ್ಯ ಪರಂಪರೆ" ಎಂಬ ಮಾಲೆಯಲ್ಲಿ ಸುಮಾರು 30 ಗ್ರಂಥಗಳು ಪ್ರಕಟವಾಗಲಿವೆ. ಕನ್ನಡ ಸಾಹಿತ್ಯವನ್ನು ಅಭ್ಯಸಿಸುವವರಿಗೆ ಅನುಕೂಲವಾಗುವಂತೆ ಪ್ರತಿಯೊಂದು ಪುಸ್ತಕದಲ್ಲಿಯೂ ಮೂವರು ವಿದ್ವಾಂಸರ ವಿದ್ವತ್ಪೂರ್ಣವಾದ ಲೇಖನಗಳಿರುತ್ತವೆ.

ಮೊದಲ ಲೇಖನವು ಕವಿ, ಕಾಲ, ಚಾರಿತ್ರಿಕ ಸನ್ನಿವೇಶಗಳು, ಆ ಕಾಲದ ಸಾಹಿತ್ಯ ಲಕ್ಷಣಗಳು, ಜನಜೀವನ ಇತ್ಯಾದಿಗೆ ಸಂಬಂಧಿಸಿದ್ದು. ಆ ಬಗೆಗೆ ಈವರೆಗೆ ನಡೆದಿರುವ ಚರ್ಚೆಗಳನ್ನು ಸಂಕ್ಷೇಪವಾಗಿ ತಿಳಿಸಿ ಯಾವ ಗಟ್ಟಿ ತೀರ್ಮಾನಕ್ಕೆ ಈಗ ಬಂದಿದೆಯೊ ಅದಕ್ಕೆ ಇರುವ ಆಧಾರ ಪ್ರಮಾಣಗಳನ್ನು ತಿಳಿಸಲಾಗುತ್ತದೆ.

ಎರಡು ಮೂರನೆಯ ಭಾಗಗಳಲ್ಲಿ ಕವಿಯ ಕೃತಿಗಳ ಸ್ವರೂಪವನ್ನೂ ಅವು ಯಾವ ಪ್ರಕಾರದ ಕಾವ್ಯ–ಗ್ರಂಥ–? ಅವುಗಳ ವಿಶೇಷ ಲಕ್ಷಣಗಳಾವುವು? ಭಾಷೆ, ಶೈಲಿ, ಆ ಆ ಕವಿಯ ಮನೋಧರ್ಮ, ಅದಕ್ಕೆ ಆ ಬಗೆಯ ಗ್ರಂಥಗಳಲ್ಲಿ ಸ್ಥಾನಮಾನ ಯಾವುದು ? ಎಂಬುದರ ನಿರ್ದೇಶನ ಮೌಲ್ಯಾಂಕನ ಮಾಡಲಾಗುತ್ತದೆ.

ಛಂದೋವಿಚಾರದಲ್ಲಿ ಸಮಾನ ಪ್ರಕಾರಗಳಿದ್ದರೆ ಅವನ್ನು ತಿಳಿಸಲಾಗುತ್ತದೆ. ಕಾಲದ ಪರಿಸ್ಥಿತಿಯ ಪರಿಣಾಮಗಳಿಂದಾಗಿ ಪ್ರತಿಫಲಿಸಿರುವ ಸಂಗತಿಗಳನ್ನೂ ಭಕ್ತಿಪಕ್ಷಪಾತಗಳನ್ನೂ ಕನ್ನಡ ನುಡಿ ತಾಳಿರುವ ರೂಪವನ್ನೂ ಶಕ್ಯವಾದ ಮಟ್ಟಿಗೆ ಕಾಣಿಸಲಾಗುತ್ತದೆ. ಪ್ರತಿಪಾದನೆ ವಸ್ತುನಿಷ್ಠವಾಗಿರುತ್ತದೆ.

ಚಾರಿತ್ರಿಕ ಅಥವಾ ವಂಶಾನುಕ್ರಮದ ಪಟ್ಟಿಕೆಗಳು, ನಕ್ಷೆಗಳು ಇದ್ದರೆ ಅನುಬಂಧವಾಗಿ ಕೊಡಲಾಗುತ್ತದೆ. ಕವಿಯ ವಿಶೇಷ ಲಕ್ಷಣ ಹೊಮ್ಮುವಂತೆ ಪದ್ಯ-ಗದ್ಯ ಖಂಡಗಳ ಒಂದು ಅನುಬಂಧವನ್ನು ಸೇರಿಸಲಾಗುತ್ತದೆ.

ಪ್ರತಿ ಸಂಪುಟದಲ್ಲಿಯೂ ಸಂಪಾದಕರ ಒಂದು ಸಮೀಕ್ಷೆ ಇರುತ್ತದೆ.

ನಾಡಿನ ಹಲವಾರು ಹೆಸರಾಂತ ವಿದ್ವಾಂಸರೂ ವಿಮರ್ಶಕರೂ ಲೇಖನಗಳನ್ನು ಬರೆಯಲು ದಯಮಾಡಿ ಒಪ್ಪಿರುತ್ತಾರೆ.